

ಈಶ್ವರ ಬಡಿಗೇರ

ಗುಂಪಿನವರನ್ನು ಕಾಣುವಾಗ ಬಟನುಗಳನ್ನು ಹಾಕಿ ಎತ್ತಿಕಟ್ಟಿದ್ದನ್ನು ಕಳಚಿ ಪಂಚೆಯನ್ನು ಇಳಿಬಿಡುತ್ತಿದ್ದೆ. ಅವರು ನನ್ನಿಂದ ಮಾಡಿಸಿದ ಹಾಗೆ ನಾಳೆ ನಿನ್ನ ತಟ್ಟಂ . . . ಅವನು ಮಾತು ಪೂರ್ಣಗೊಳಿಸಲಿಲ್ಲ. ಅವಳು ಮಧ್ಯದಲ್ಲೆ ಬಾಯಿ ಹಾಕಿದಳು:

'ನನ್ನ ಜೊತೆ ತುಂಡಾಟವಾಡಿದ್ರೆ, ಆಡಿದಪ್ಪಿಗೆ ಗೊತ್ತಾಗುತ್ತೆ'.

'ಅರ್ಥವಾಗಲಿಲ್ಲ'. ವಿಷಯ ಗೊತ್ತಾಗದೆ ಅವನು ಉದ್ಗರಿಸಿದ.

ಕುಸ್ತಿಪಟು ಮಮ್ಮದನ ಮಗಳು ನಾನು.

'ಯಾ ಅಲ್ಲಾಹ್!'. . . ಅವನು ಒಂದು ವಿಶಿಷ್ಟ ಉದ್ಗಾರದೊಂದಿಗೆ ಹೌಹಾರಿದ.

'ಏನು, ಹೆದ್ರಿಬಿಟ್ಟೆಯಾ?' ಅವಳು ಎದೆಗೆ ಇರಿದ ಹಾಗೆ ಕೇಳಿದಳು.

'ಛೇ! ಇದು ಕಾಲೇಜಿನಲ್ಲಿ ನಾವು ಬಳಸುವ ಒಂದು ತಂತ್ರ!' ಅವನು ಸುಳ್ಳು ಹೇಳಿದ.

'ಅಲ್ಲ; ಅದು ಸುಳ್ಳು. ನನ್ನ ಬಾಪ್ಪಾನನ್ನು ಮನಸ್ಸಿನಲ್ಲಿ ನೆನೆದೇ ಹೌಹಾರಿದ್ದಿ' ಅವಳು ಒತ್ತಿ ಹೇಳಿದಳು.

ಇವಳು ಆಗಸಕ್ಕೇ ಏಣಿ ಹಾಕುತ್ತಿರುವಳಲ್ಲ! ಪರವಾಗಿಲ್ಲ ಹೆಣ್ಣು! ಅವನು ಮನಸ್ಸಿನಲ್ಲಿ ಬರೆದ.

ನಿನ್ನ ಹೆಸರು ಗೊತ್ತಾಗಲಿಲ್ಲ ವಿಷಯ ಬದಲಾಯಿಸಲು ಹೇಳಿದ.

'ಅನಾರ್ಕಲಿ'

'ಆಶ್ಚರ್ಯ' ಅವನು ಕಕ್ಕಾಬಿಕ್ಕಿಯಾಗಿ ಉದ್ಗರಿಸಿದ.

'ಯಾವುದು ಆಶ್ಚರ್ಯ?' ಅವಳು ಕೇಳಿದಳು.

'ನನ್ನ ಹೆಸರು ಸಲೀಂ. ಮೊಘಲ ಸಾಮ್ರಾಜ್ಯದ ಎಣೆವಕ್ಕಿಗಳು ಸಲಿಂ ಮತ್ತು ಅನಾರ್ಕಲಿ'

'ಅದು ಗೊತ್ತು. ಸಲಿಂ ರಾಜಕುಮಾರನ ಪ್ರೇಯಸಿಯಾಗಿದ್ದಳು ಅನಾರ್ಕಲಿ. ಅದಕ್ಕೆ?'

'ನಮ್ಮಿಬ್ಬರ ಹೆಸರುಗಳ ಚರಿತ್ರೆ ತಿಳಿದುಕೊಂಡ ಬಗ್ಗೆ ನಾನು ಸಂತಸಪಡ್ತೇನೆ'

'ಸಂತಸಪಡಲು ದುಡುಕಬೇಡ. ಸಲ್ಲದ ವಿಚಾರಗಳು ಮನದಲ್ಲೇಳುವಾಗ ನನ್ನ ಬಾಪ್ಪಾನನ್ನು ನೆನೆಯೋದು ಒಳ್ಳೇದು. ನೆನಪಿರಲಿ, ಇದೊಂದು ಮುನ್ನೆಚ್ಚರಿಕೆ.'

ಹೀಗೆ, ಸಲೀಮಿನ ಮುಖ ನೋಡುತ್ತ ಖಡಾಖಂಡಿತವಾಗಿ ಹೇಳಿದ ಅವಳು ಸರಸರನೆ ಮುಂದಕ್ಕೆ ಹೆಜ್ಜೆ ಹಾಕಿದಳು.

ತಾನು ಕುಸ್ತಿಪಟು ಮಮ್ಮದನ ಮಗಳು ಎಂದಿದ್ದೆ. ಇಸ್ಮಾಯಿಲ್ ಮೇಷ್ಟ್ರ ಮಗಳೆಂದು ಕಾಲ ಕೂಡಿ ಬಂದಾಗ ಇವನಿಗೆ ಗೊತ್ತಾಗುತ್ತೆ; ಹೆಣ್ಣುಮಕ್ಕಳೂ ತಂತ್ರ ಬಳಸಬಲ್ಲರು ಎಂದುಕೂಡ. ಅವಳು ತನ್ನಷ್ಟಕ್ಕೆ ನಕ್ಕಳು. ಮಾವಿನ ತೋಪು ದಾಟಿದಾಗ ದಾರಿ ಎರಡಾಗಿ ಪರಸ್ಪರ ಬೇರ್ಪಟ್ಟಿತ್ತು.

ಸಲಿಂ, ನನ್ನ ದಾರಿ ಇದು. ನನ್ನನ್ನು ದ್ವೇಷಿಸಬೇಡ. ಮನಬಿಚ್ಚಿ ಮಾತಾಡೋಳು ನಾನು. ಸಲಿಂ ಮರುಮಾತು ಆಡಲಿಲ್ಲ. ಮುಗುಳ್ನಗಲು ಪ್ರಯತ್ನಿಸಿದ.

ಹೇಮಂತಗಳೂ ವಸಂತಗಳೂ ಹೂ ಬಿಟ್ಟದ್ದೂ ಬಿಟ್ಟ ಹೂಗಳನ್ನು ಉದುರಿಸಿದ್ದೂ ಅವರಿಬ್ಬರ ಸ್ನೇಹವನ್ನೂ ಮುನಿಸನ್ನೂ ನೋಡುತ್ತಲೆ ಆಗಿತ್ತು.

ನಿಡುಗಾಲದ ಕಾದಿರುವಿಕೆಯ ಬಳಿಕ ಗ್ರಾಮದಿಂದ ಬಸ್ ಸರ್ವೀಸ್ ಶುರುವಾಯಿತು. ದಟ್ಟ ಮಳೆಗಾಲದ ತಿಂಗಳಲ್ಲಿ ಬಸ್ ಸರ್ವೀಸ್ ಒಂದು ವರದಾನವಾಯಿತು.

ಎಂಜಿನಿಯರಿಂಗ್ ಕಾಲೇಜಿಗೆ ಬರುವುದೂ ಮರಳುವುದೂ ಇನ್ನು ಮುಂದೆ ಬಸ್ಸಿನ ಕಾಲಿನಲ್ಲೆ. . .ಅದನ್ನು ನೆನೆಯುತ್ತ ಸಲಿಂ ಮತ್ತು ಅನಾರ್ಕಲಿ ಸಂತಸಪಟ್ಟರು.

ಗ್ರಾಮವಾಸಿಗಳು ಬಸ್ಸಿನ ಪ್ರಥಮ ಪ್ರಯಾಣವನ್ನು ಉತ್ಸವವಾಗಿ ಆಚರಿಸಿದರು. ಶುಭವನ್ನು ಹಾರೈಸಲೂ ಪ್ರಯಾಣಿಸಲೂ ಬಹಳಷ್ಟು ಜನ ಸ್ಟ್ಯಾಂಡ್‌ಗೆ ಬಂದರು.

ಪ್ರಯಾಣಕ್ಕೆ ಬಸ್ ಸಜ್ಜಾಯಿತು. ಬಸ್ಸ್ ಒಳಗೆ ದುಪ್ಪಟ್ಟು ಪ್ರಯಾಣಿಕರು. ಬಸ್ ಗುಂಡಿಗಳಲ್ಲಿ ಇಳಿಯುತ್ತಾ ಹತ್ತುತ್ತಾ ತೂನೆದಾಡತೊಡಗಿತು. ಕಡಲ ತೆರೆಗಳ ಮೇಲೆ ಓಲಾಡುತ್ತಿರುವ ದೋಣಿಯ ಹಾಗೆ.

ಅನಾರ್ಕಲಿಯ ಸೀಟಿನ ಹಿಂಬದಿಯಲ್ಲಿ ಸಲಿಂ. ಅವಳು ತಲೆಗೆ ಹೊದ್ದ ತಟ್ಟಂ ಗಾಳಿಯಲ್ಲಿ ತೊನೆಯಿತು. ಅದು ಅವನ ಮುಖಕ್ಕೆ ತುಪ್ಪಳದ ಸ್ಪರ್ಶವಾಯಿತು. ಅದರ ರೆಕ್ಕೆಯ ಮೇಲೆ ಕುಳಿತು ಅವನು ಬಸ್‌ನ ಮುಂದೆ ಹಾರಾಡಿದ. ಅವನ ಕಲ್ಪನೆಗಳಲ್ಲಿ ಕಾಮನಬಿಲ್ಲಿನ ಕಾಂತಿ ಕಳೆಗಟ್ಟಿತು.

ಬಸ್ ಮುಕ್ಕುತ್ತ ಮುಲುಗುಡುತ್ತ ಚಾಮುಂಡಿ ಗುಡ್ಡವನ್ನು ಹತ್ತಿತು. ಗುಡ್ಡದ ತಿರುವಿನಲ್ಲಿ ತೀರಾ ಅನಿರೀಕ್ಷಿತವಾಗಿ ಎದುರಿನಿಂದ ಒಂದು ದೈತ್ಯಾಕಾರದ ಲಾರಿ ಚೀರುತ್ತಾ ಬರುತಿತ್ತು. ಲಾರಿಗೆ ಹಾದು ಹೋಗುವ ಸಲುವಾಗಿ ಬಸ್ ಬದಿಗೆ ಸರಿಯಿತು. ತೋಯ್ದ ಮಣ್ಣಿನಲ್ಲಿ ಬಸ್ಸಿನ ಟಯರು ಹುದುಗಿತು. ಬದಿಗೆ ಕಟ್ಟಲಾದ ಕಲ್ಲಿನ ದಂಡೆ ಕುಸಿದು ಬಸ್ ಪ್ರಪಾತಕ್ಕೆ ಮಗುಚಿತು. ಒಂದೇ ಕ್ಷಣದಲ್ಲಿ ಪರಿಸರ ಭಯಾನಕವಾಯಿತು. ಸಮೂಹ ಬೊಬ್ಬೆಗಳೂ ಆರ್ತನಾದಗಳೂ ಸಾವಿನ ಹೊಟ್ಟೆಯನ್ನು ಸೇರಿದವು.

ಬುಡಮೇಲಾಗಿ ಮಗುಚಲ್ಪಟ್ಟ ಬಸ್ಸಿನ ಕಿಟಕಿಯ ಮೂಲಕ ಅನಾರ್ಕಲಿ ಹೊರಳಿ ಎದ್ದಳು; ಒಂದು ದುಸ್ವಪ್ನವನ್ನು  ಕಂಡು ಎಚ್ಚರಗೊಂಡವಳ ಹಾಗೆ.

ಅನಾರ್ಕಲಿಯ ಮೇಲುಡುಗೆಯ ಒಳಗಿಂದ ನೆತ್ತರು ಜಿನುಗುತ್ತಾ ಇದೆ. ಅವಳು ತನ್ನ ಎದೆಯಲ್ಲಾದ ಗಾಯದ ನೋವನ್ನು ಲಕ್ಷಿಸದೆ ಸಲೀಮನನ್ನು ಹುಡುಕಿದಳು.

ದೂರದಲ್ಲಿ, ಕಗ್ಗಲ್ಲ ತುಣುಕುಗಳೆಡೆಯಲ್ಲಿ ತನ್ನ ರೇಶಿಮೆ ತಟ್ಟವನ್ನು ಕಂಡಳು. ನೆತ್ತರಿಂದ ಚಿತ್ರಿತವಾದ ತಟ್ಟಂ. ಅವಳು ಬೊಬ್ಬಿಡುತ್ತಾ ಅದರತ್ತ ದೌಡಾಯಿಸಿದಳು. ನಡುಗುತ್ತಿರುವ ಕೈಯಿಂದ ತಟ್ಟವನ್ನು ಸರಿಸಿದಳು. ಕರುಳನ್ನು ಕರಗಿಸುವ ದೃಶ್ಯ. ಸಲೀಮಿನ ತಲೆಗೂ ಎದೆಗೂ ಆಗಿರುವ ಆಳವಾದ ಗಾಯಗಳಿಂದ ನೆತ್ತರು ಚಿಮ್ಮುತ್ತಲೇ ಇದೆ.

ಅಪಘಾತದ ಸುದ್ದಿ ಕೇಳಿ ಧಾವಿಸಿ ಬಂದವರು ಕಂಡದ್ದು ಹೃದಯ ಬೇಧಕವಾದ ಒಂದು ದೃಶ್ಯ ಅನಶ್ವರ ಪ್ರಣಯವೊಂದರ ಅಂತ್ಯ.

ಅನಾರ್ಕಲಿ ಸಲೀಮಿನ ಜರ್ಜರಿತ ಶಿರವನ್ನು ತನ್ನ ತೊಡೆಯ ಮೇಲಿರಿಸಿ ಬೊಬ್ಬೆ ಹಾಕುತ್ತಿರುವಳು. ತನ್ನೊಳಗೆ ಮಿಡುಕುತ್ತಿರುವ ಪ್ರಾಣವನ್ನು ಪ್ರಿಯನೊಳಗೆ ಸುರಿಯಲೊ ಎಂಬಂತೆ ಅವನ ಛಿದ್ರಹೃದಯವನ್ನು ತನ್ನ ಹರಿದ ಹೃದಯಕ್ಕಂಟಿಸಿ ಬಿಗಿದಪ್ಪುತ್ತಿರುವಳು.

■